

ಹಣ ತೆಗೆದುಕೊಂಡು ಬರುತ್ತೇನೆ. ನೀನು ನೇರವಾಗಿ ಊರಿನ ಮನೆಗೆ ಬಂದು ಸಂಸ್ಕಾರಕ್ಕೆ ಎಲ್ಲ ಸಿದ್ಧತೆ ಮಾಡು' ಎಂದಾಗ ಹೌಹಾರಿ ಕೂತಿದ್ದ. ನಡುರಾತ್ರಿಯಲ್ಲಿಯೇ ಎದ್ದು ಬೆಂಗಳೂರಿಂದ ಮಂಗಳೂರಿಗೆ ಮತ್ತು ಅದೇ ರಾತ್ರಿ ಮಂಗಳೂರಿಂದ ಬೆಂಗಳೂರಿಗೆ ವಿಮಾನದ ಟಿಕೆಟ್‌ಗಳನ್ನು ಕಾದಿರಿಸಿದ್ದ.

ಹುಬ್ಬಳ್ಳಿಯ ಅಣ್ಣ ಎಂದರೆ ದೊಡ್ಡಪ್ಪನ ಮಗ. ಊರಿನ ದೊಡ್ಡಮನೆಯ ಮೂರು ಗಂಡು ಮಕ್ಕಳಿಗೆ ತಲಾ ಒಬ್ಬರಂತೆ ಇವರು ಮೂರು ಗಂಡು ಮಕ್ಕಳು. ಉಳಿದಂತೆ ದೊಡ್ಡಪ್ಪನಿಗೆ ನಾಲ್ಕು ಹೆಣ್ಣು, ಚಿಕ್ಕಪ್ಪನಿಗೆ ಒಂದು ಹೆಣ್ಣು. ಇವನಪ್ಪನಿಗೆ ಒಬ್ಬನೇ ಮಗ, ಅದು ಇವನೇ.

ಕಾಲಚಕ್ರಕ್ಕೆ ಸಿಕ್ಕಿ ನರಳಿದರೂ, ಇನ್ನೂ ಪಾಲಾಗದ ಅವಿಭಕ್ತ ಕುಟುಂಬ. ಕೊಲ್ಲೂರಿನ ಮೇಲೆ, ಕೊಡಚಾದ್ರಿಯ ಕೆಳಗೆ ಹದಿನಾಲ್ಕು ಎಕರೆ ಅಡಕೆ ತೋಟ, ಮೂವತ್ತಾರು ಎಕರೆ ಗದ್ದೆ. ಹೆಬ್ಬಾಗಿಲ ದೊಡ್ಡಮನೆ. ದೊಡ್ಡಪ್ಪ, ಅಪ್ಪ ಇಬ್ಬರೂ ಹೋಗಿ ಹಲವು ವರ್ಷಗಳಾಗಿತ್ತು. ಮನೆಯಲ್ಲಿ ವಯಸ್ಸಾದ ಚಿಕ್ಕಪ್ಪ– ಚಿಕ್ಕಮ್ಮ. ಅವರ ಮಗ ಮತ್ತವನ ಕುಟುಂಬ ಮಾತ್ರ. ಉಳಿದಂತೆ ಎಲ್ಲ ಹಕ್ಕಿಗಳೂ ಗೂಡು ಬಿಟ್ಟು, ಎಲ್ಲೆಲ್ಲೋ ಹೋಗಿ ಗೂಡು ಕಟ್ಟಿಕೊಂಡಿದ್ದವು.

ನಲವತ್ತೈದು ದಾಟದ ಹುಬ್ಬಳ್ಳಿಯ ಅಣ್ಣ ಇದ್ದಕ್ಕಿದ್ದಂತೆ ನೇಣು ಹಾಕಿಕೊಂಡಿದ್ದು ಏಕೆ? ಹುಡುಗನಾಗಿದ್ದಾಗಲೇ ಊರು ಬಿಟ್ಟು ಓಡಿ ಹೋಗಿ, ಹುಬ್ಬಳ್ಳಿಯ ಸಾಹುಕಾರರ ದಿನಸಿ ಅಂಗಡಿಯಲ್ಲಿ ಕೆಲಸಕ್ಕೆ ಸೇರಿದ್ದ ಅಣ್ಣ, ಅಲ್ಲಿಯೇ ಬೆಳೆದು, ಬೆವರು ಸುರಿಸಿ ದುಡಿದ ಜೀವ. ಹಾಗೆ ದುಡಿಯುತ್ತಲೇ ತನ್ನ ಸ್ವಂತದ ಅಂಗಡಿ ಇಟ್ಟು ಸಾಹುಕಾರನಾಗಿ, ಮದುವೆಯಾಗಿ, ಅಪ್ಪನಾಗಿ, ಮನೆ ಕಟ್ಟಿ ಗಟ್ಟಿಯಾಗಿದ್ದವ!

ಈಗ ಇದ್ದಕ್ಕಿದ್ದಂತೆ ನೇಣು!?

ಬದುಕೆಂದರೇ ಇದೇ ಅಲ್ಲವೇ!?

ಎಲ್ಲವೂ ಅನಿಶ್ಚಿತ.

ಎಲ್ಲವೂ ಅನಿರೀಕ್ಷಿತ.

ನಾವು ಎಣಿಸಿಕೊಂಡಂತೆ ಏನೂ ಆಗುವುದಿಲ್ಲ. ಅದೇನಾಗಬೇಕೋ ಅದಾಗಿ ಬಿಡುತ್ತದೆ.

ಇವನ ಬದುಕಲ್ಲಿ ಕೂಡ ಅದೇ ಆಗಿದ್ದಲ್ಲವೇ. ಹುಟ್ಟಿದ್ದು ಘಟ್ಟದ ಮೂಲೆಯ ಮನೆಯಲ್ಲಾದರೂ, ಓದಲ್ಲಿ ಪ್ರಚಂಡ. ಮಹಾನ್ ಬುದ್ಧಿವಂತ.

ಕೊಡಚಾದ್ರಿಯ ತಪ್ಪಲಿಂದ ಮೂಡಬಿದ್ರೆಯ ಕಾಲೇಜು. ಅಲ್ಲಿಂದ ಐಐಟಿ ಮದ್ರಾಸ್. ಅಲ್ಲಿಯೇ ಕೈಹಿಡಿದವಳ ಮೊದಲ ನೋಟಕ್ಕೆ ಮರುಳಾದದ್ದು. ಇಬ್ಬರೂ ಜೊತೆಯಾಗಿ ಸ್ಯಾನ್ ಹೋಸ್ ಸೇರಿದ್ದು. ಆಪಲ್‌ನಲ್ಲಿ ಜೊತೆಯಾಗಿ ಕೆಲಸ ಮಾಡುತ್ತಲೇ ಬದುಕು ಕಟ್ಟಿಕೊಳ್ಳಲು ಯತ್ನಿಸಿ ಸೋತದ್ದು. ಕೊನೆಗೆ ಜೊತೆಗಿರಲಾಗದೇ ಡೈವೋರ್ಸ್ ಪೇಪರ್‌ಗೆ ಸಹಿ ಹಾಕಿ, ಮಗುವನ್ನು ಆಕೆಯ ಕೈಯಲ್ಲಿಯೇ ಬಿಟ್ಟು, ಬೆಂಗಳೂರಿಗೆ ಒಂಟಿಯಾಗಿ ಬಂದು ನೆಲೆ ನಿಂತದ್ದು.

ಆನಂತರ ಬೆಂಗಳೂರಲ್ಲಿ ಒಂಟಿಯಾಗಿ ಬದುಕು ಕಟ್ಟಿಕೊಳ್ಳುವ ಯತ್ನದಲ್ಲಿದ್ದಾಗಲೇ ಅಪ್ಪ– ಅಮ್ಮ ಇಬ್ಬರೂ ಇನ್ನಿಲ್ಲವಾದ ಮೇಲೆ ಇವನು ಅಕ್ಷರಶಃ ಬದುಕಲ್ಲಿ ಒಂಟಿ. ಇನ್ನೊಮ್ಮೆ ಯಾವುದೇ ಕಾರಣಕ್ಕೆ ಪ್ರೀತಿ– ಪ್ರೇಮ– ಸಂಬಂಧಗಳ ಬಲೆಗೆ ಬೀಳದೇ ಒಬ್ಬಂಟಿಯಾಗಿಯೇ ಬದುಕು ಸವೆಸಬೇಕು ಎಂದು ನಿರ್ಧರಿಸಿದ್ದವ ಇದ್ದಕ್ಕಿದ್ದಂತೆ ಕೈಕೊಟ್ಟವಳ ಕಣ್ಣೋಟಕ್ಕೆ ಕರಗಿ ಹೋಗಿದ್ದು. ಲಿವ್ ಇನ್‌ನಲ್ಲಿ ಮಿಂದೆದ್ದದ್ದು.

ಐಬಿಎಂನಲ್ಲಿ ಜೊತೆಯಾಗಿದ್ದಾಗ ಅದು ಏಳು ವರ್ಷಗಳ ಪ್ರಣಯವಾಗಿ ಒಂದು ದಿನ ಇದ್ದಕ್ಕಿದ್ದಂತೆ ಎಲ್ಲವೂ ಇಲ್ಲವಾಗಿ ಬದುಕೇ ಬೇಡ ಎನಿಸಿದ್ದು. ಬೇಡ ಎನಿಸಿದರೂ ನಮಗೆ ಬೇಕಾದಾಗ ಅದು ಮುಗಿಯುವುದಿಲ್ಲವಲ್ಲ. ನಮಗೆ ಬೇಕಿದ್ದರೂ, ಬೇಡದಿದ್ದರೂ ಅದು ಮುಂದೆ ಸಾಗುತ್ತಲೇ ಇರುತ್ತದೆ. ಸಾಗಲೇ ಬೇಕು.

ಬೇಡವೆಂದಾಗ...

ಹುಬ್ಬಳ್ಳಿಯ ಅಣ್ಣನಂತೆ!

ಇಲ್ಲವಾಗಿಸಿಕೊಳ್ಳಬೇಕೇ?

ಇಲ್ಲವಾಗಿಸಿಕೊಳ್ಳಬಹುದೇ?

ಅದು ಅಷ್ಟು ಸುಲಭವೇ?

ಈ ಭೂಮಿಯ ಮೇಲಿರುವ ಪ್ರತಿಯೊಬ್ಬ ಮನುಷ್ಯ ಕೂಡ ಜೀವನದಲ್ಲಿ ಮುಗ್ಗರಿಸಿದಾಗ, ಕುಸಿದು ಹೋದಾಗ, ಇನ್ನು ಏನೂ ಉಳಿದಿಲ್ಲ ಎಂದು